

ಕಾಡಿನ ಭಾಷೆ ಅರ್ಥ ಮಾಡಿಕೊಳ್ಳಲು ಅಲ್ಲಿನ ಪ್ರಾಣಿಗಳ ನಡವಳಿಕೆಗಳು ತಿಳಿದಿರಬೇಕು



ಮರಗಳ ನಡುವಣ
ಸಂಭಾಷಣೆಗೆ ಮುಗಿಲಿನ ಸಾಕ್ಷಿ

ಮುಗಿಲ ಮೋಡಗಳನ್ನು ಕಡೆಯುವಂತೆ
ಚಾಚಿಕೊಂಡಿರುವ ಮರದ ಗೆಲ್ಲು



ಬೇಸಿಗೆ, ಮಳೆ, ಚಳಿಗಾಲಗಳಲ್ಲಿ ಬದಲಾಗುವ ಕಾಡ ಜೀವ ಸಂಕುಲಗಳ ಜೀವನಕ್ರಮ ಪ್ರಾಣಿ–ಪಕ್ಷಿಗಳಲ್ಲಿ ಬದಲಾಗುವ ಬಣ್ಣ, ಸಂತಾನ ಪ್ರಕ್ರಿಯೆಗಳನ್ನು ಗಮನಿಸಿದಾಗ ನಿಜವಾದ ಕಾಡಿನ ಬದುಕು ಅನಾವರಣಗೊಳ್ಳುತ್ತಿರುತ್ತದೆ. ಬದುಕಿನ ಹೊಸ ಹೊಸ ಪಾಠಗಳು ಗೋಚರಿಸುತ್ತಿರುತ್ತವೆ. ತಿಳಿವಳಿಕೆಯ ಪ್ರಪಂಚ ವಿಸ್ತಾರಗೊಳ್ಳುತ್ತಲೇ ಕಾಡೆಂದರೆ ಕೇವಲ ಹುಲಿ, ಚಿರತೆ, ಜಿಂಕೆ, ಆನೆ, ಕಾಡೆಮ್ಮೆಗಳ ದರ್ಶನ ಮಾತ್ರವಲ್ಲ ಎನ್ನುವುದು ಅರ್ಥವಾಗುತ್ತದೆ. ಗಿಡಮರ, ಹುಲ್ಲು, ಬಳ್ಳಿ, ಲಂಟಾನಗಳ ಬದುಕಿನ ಹೋರಾಟಗಳನ್ನು ಅರಿಯಲು ಪ್ರಯತ್ನಿಸುವುದು. ಪ್ರಾಣಿಪಕ್ಷಿಗಳ ಚಲನೆ, ಧ್ವನಿ, ಕೂಗಿಗೆ ಕಿವಿಯಾಗುವುದು. ಕಾಡನ್ನು ಪ್ರವೇಶಿಸಿದರೆ ಕಣ್ಣು ಮಾತ್ರ ತೆರೆಯುವುದಲ್ಲ, ಜೊತೆಗೆ ಕಿವಿ ಮೂಗು ಜಾಗ್ರತವಾದರೆ ಕಾಡನ್ನು ಅರಿಯಲು ಸಾಧ್ಯವಾಗುತ್ತದೆ. ಕಾಡನ್ನು ನೋಡುವ ಬಗೆ ಎಂದರೆ ನಮ್ಮೆಲ್ಲಾ ಇಂದ್ರಿಯಗಳನ್ನು ಜಾಗ್ರತಗೊಳಿಸಿಕೊಂಡು ಸ್ಪಂದಿಸುವುದು ಎಂದರ್ಥ. ಇಂಥ ಸೂಕ್ಷ್ಮತೆ ನಮ್ಮನ್ನಾವರಿಸದಿದ್ದರೆ, ಇಂದ್ರಿಯಗಳನ್ನು ಮನುಷ್ಯನಿಗಿಂತ ಹೆಚ್ಚು ಸೂಕ್ಷ್ಮವಾಗಿ ಜಾಗ್ರತಗೊಳಿಸಿಕೊಂಡಿರುವ ವನ್ಯಜೀವಿಗಳು ಮನುಷ್ಯನೆಂಬ ಪ್ರಾಣಿಯನ್ನು ಗಮನಿಸುತ್ತವೆಯೇ ಹೊರತು ನಾವು ಕಾಡಿನ ಜೀವಿಗಳನ್ನು – ಅಲ್ಲಿನ ಜೀವಜಾಲ ಸರಪಳಿಯನ್ನು ಗಮನಿಸುವುದು ಸಾಧ್ಯವಾಗುವುದಿಲ್ಲ.

ಭಾವನಾತ್ಮಕ ಲೋಕದೊಳಗೆ ಕಲ್ಪನಾವಿಲಾಸದಲ್ಲಿ ಮುಳುಗಿರುವ ನಾವು ತಾಂತ್ರಿಕತೆಯೊಂದಿಗೆ ಕ್ರಿಯಾತ್ಮಕ ಭಾವಗಳೊಂದಿಗೆ ಬಣ್ಣ, ಬ್ರಷ್, ಕ್ಯಾಮೆರಾ, ಅಕ್ಷರ (ಸಾಹಿತ್ಯ), ಧ್ವನಿ (ಸಂಗೀತ), ನಟನೆಗಳಿಂದ ತನ್ನದೇ ಆದ ರೀತಿಯಲ್ಲಿ ಪ್ರತಿಕ್ರಿಯಿಸುವ ಮನುಷ್ಯ ತನ್ನ ಮನಸ್ಸಿನ ಆಳದ ಚಿಂತನಾಕ್ರಮದಲ್ಲಿ ವಿಭಿನ್ನವಾಗಿ ಪ್ರತಿಕ್ರಿಯಿಸುತ್ತಿರುತ್ತಾನೆ. ಪ್ರತಿಕ್ರಿಯಿಸುವ, ಅಭಿವ್ಯಕ್ತಪಡಿಸುವ ರೀತಿ ಭಿನ್ನವಾಗಿದ್ದಾಗ ಕಲಾಕೃತಿ ಎನ್ನಿಸಿಕೊಂಡು ಬಿಡುತ್ತದೆ. ನೋಡಿದ್ದನ್ನು ಕೇಳಿದ್ದನ್ನು ಹಾಗೆಯೇ ಮರುಸೃಷ್ಟಿಸಿದರೆ 'ನಕಲು' ಎನ್ನಿಸುತ್ತದೆ. ನೋಡುವ ಹಾಗೂ ಅಭಿವ್ಯಕ್ತಿಸುವ ಕ್ರಿಯೆ ನೋಡುಗನಲ್ಲಿ ಪ್ರಭಾವ ಬೀರಿ, ವಿಭಿನ್ನ ನೆಲೆಯಲ್ಲಿ ಚಿಂತನೆಗೆ ಹಚ್ಚಿ, ಮತ್ತೆ–ಮತ್ತೆ ಮರುಸೃಷ್ಟಿಗೆ ಅಣಿಮಾಡಿಕೊಟ್ಟಾಗ ಮಾತ್ರ ಕಲಾತ್ಮಕವಾಗುತ್ತದೆ. ಕಲಾತ್ಮಕತೆ ಎನ್ನುವುದು ಒಂದು ರೀತಿಯಲ್ಲಿ ಅವರವರ ಅನುಭವದ ವ್ಯಾಪ್ತಿಗೆ ಸೇರಿದ್ದಾದರೂ ಆ ಕ್ಷಣದ ಕ್ರಿಯಾತ್ಮಕ ಪ್ರತಿಸ್ಪಂದನೆ ಮುಖ್ಯವಾಗಿರುತ್ತದೆ.

ಚಿತ್ರವೊಂದು ಕಾವ್ಯವಾಗುವ ಅನುಭವವನ್ನು ಕಪ್ಪುಬಿಳುಪಿನ ಹಾದಿಯಲ್ಲಿ ಕಂಡುಕೊಳ್ಳಲು ಪ್ರಯತ್ನಿಸಿದ್ದೇನೆ. ಇಲ್ಲಿನ ಚಿತ್ರಗಳು ಛಾಯಾಚಿತ್ರಗಳೋ ಇಲ್ಲವೇ ಬಣ್ಣ ಬ್ರಷ್‌ಗಳಿಂದ ಸೃಷ್ಟಿಸಿದ ಪೇಂಟಿಂಗ್‌ಗಳೋ ಗೊತ್ತಾಗುತ್ತಿಲ್ಲ. ನನ್ನ ಕ್ರಿಯಾತ್ಮಕ ಮನಸ್ಸಿಗೆ ನಿಸರ್ಗ ನೀಡಿದ ಚೆಲುವಿಗೆ ಸಾಕ್ಷಿಯಾಗಿ ಕಪ್ಪುಬಿಳುಪಿನ ಹಾದಿಯಲ್ಲಿ ಈ ಚಿತ್ರಗಳು ಮೂಡಿವೆ.

ಪ್ರತಿಕ್ರಿಯಿಸಿ: feedback@sudha.co.in